# ಸಿನಿಮಾ ರಂಗದ ಹೊಸ ನಕ್ಷತ್ರ



■ ಪ್ರವೀಣ ಕುಲಕರ್ಣಿ

ಭಾರತೀಯ ಕ್ಷಿತಿಜದಲ್ಲಿ ಉದಯಿಸಿದ ಕೆಲವು ನಕ್ಷತ್ರಗಳು ಆಗಾಗ ಫಕ್ಕನೆ ಮಿಂಚಿ, ಜಗದ ಬಾನಂಗಳದಲ್ಲಿ ಬೆಳಕಿನ ಕೋಲ್ಮಿಂಚು ಹರಿಸುವುದುಂಟು. ಪಶ್ಚಿಮ ಬಂಗಾಳದ ಯುವ ನಿರ್ದೇಶಕ ಸೌನಕ್ ಸೇನ್ ಅಂತಹ ನಕ್ಷತ್ರಗಳಲ್ಲಿ ಒಬ್ಬರಾಗಿದ್ದಾರೆ. ಮೂವತ್ತೈದರ ಹರೆಯದ ಸೌನಕ್, 'ಆಲ್ ದಟ್ ಬ್ರೀತ್ಸ್' ಸಿನಿಮಾದ ಮೂಲಕ ಜಗತ್ತಿನ ಸಿನಿಮಾಪ್ರಿಯರ ಮನ ಗೆದ್ದಿದ್ದಾರೆ. ಒಂದರ ಬೆನ್ನಹಿಂದೆ ಒಂದರಂತೆ ಚಿತ್ರೋತ್ಸವದಲ್ಲಿ ಈ ಚಿತ್ರದ ಮೂಲಕ ಸದ್ದು ಮಾಡುತ್ತಲೇ ಹೊರಟಿದ್ದಾರೆ.

'ಆಲ್ ದಟ್ ಬ್ರೀತ್ಸ್' ಚಿತ್ರ ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ ಬಿಡುಗಡೆಯಾದ ಮೊದಲ ದಿನದಿಂದಲೂ ಚರ್ಚೆಯಲ್ಲಿದೆ. ಸನ್‌ಡಾನ್ಸ್ ಫೆಸ್ಟಿವಲ್‌ನಲ್ಲಿ ಗ್ರ್ಯಾಂಡ್ ಜ್ಯೂರಿ ಪ್ರಶಸ್ತಿಯನ್ನು ಗೆದ್ದ ಈ ಚಿತ್ರ, ಕ್ಯಾನ್ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಸಾಕ್ಷ್ಯಚಿತ್ರಕ್ಕಾಗಿ ಪ್ರತಿಷ್ಠಿತ ಗೋಲ್ಡನ್ ಐ ಪುರಸ್ಕಾರವನ್ನೂ ಪಡೆದಿದೆ. ಆಸ್ಕರ್ ಪ್ರಶಸ್ತಿ ರೇಸ್‌ನಲ್ಲೂ ಈ ಚಿತ್ರ ಇತ್ತು. ಅಲ್ಲಿಯೂ ಮಿಂಚಿತೋ ಹೇಗೋ ಎನ್ನುವುದು ನಿಮಗೆ ಗೊತ್ತಾಗಿರಲಿಕ್ಕೂ ಸಾಕು. ಆಸ್ಕರ್ ಫಲಿತಾಂಶ ಏನೇ ಇರಲಿ, ಸೌನಕ್ ಈಗಾಗಲೇ ದೊಡ್ಡದಾಗಿಯೇ ಹೆಜ್ಜೆಗುರುತು ಮೂಡಿಸಿದ್ದಾರೆ.

ದೆಹಲಿಯ ಎಜೆಕೆ ಸಮೂಹ ಸಂವಹನ ಸಂಶೋಧನಾ ಕೇಂದ್ರದಿಂದ ಪದವಿ ಪಡೆದಿರುವ ಸೌನಕ್, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯನ್ನು ಪೂರೈಸಿದ್ದಾರೆ. ಕಾಲೇಜಿನಿಂದ ಹೊರಬಿದ್ದ ಮೇಲೆ ಅವರು ನಿರ್ಮಿಸಿದ ಸಾಕ್ಷ್ಯಚಿತ್ರಗಳು ರಾಷ್ಟ್ರ ಹಾಗೂ ಅಂತರರಾಷ್ಟ್ರ ಮಟ್ಟದ ಸಂಸ್ಥೆಗಳಿಂದ ಪ್ರಶಂಸೆಗೆ ಪಾತ್ರವಾಗಿವೆ.

ದೆಹಲಿಯ ಮಿತಿಮೀರಿದ ಮಾಲಿನ್ಯದ ವಾತಾವರಣದಿಂದ ಪ್ರಾಣಾಪಾಯ ಎದುರಿಸಿ ಧರೆಗುರುಳುತ್ತಿದ್ದ ಕಪ್ಪು ಹದ್ದುಗಳನ್ನು ಇಬ್ಬರು ಮುಸ್ಲಿಂ ಸಹೋದರರು ರಕ್ಷಿಸುವ ಕಥೆಯೇ 'ಆಲ್ ದಟ್ ಬ್ರೀತ್ಸ್'. ಮೊಹಮ್ಮದ್ ಸೌದ್ ಮತ್ತು ನದೀಮ್ ಶಹಜಾದಾಸ್ ಎಂಬ ಸಹೋದರರು ದಶಕಕ್ಕೂ ಹೆಚ್ಚು ಕಾಲದಿಂದ ದೆಹಲಿಯ ವಜೀರಾಬಾದ್ ಗ್ರಾಮದಲ್ಲಿ ಸಾವಿರಾರು ಕಪ್ಪು ಹದ್ದುಗಳನ್ನು ರಕ್ಷಿಸಿದ ಕಥೆಯನ್ನು ಈ ಚಿತ್ರ ಕಟ್ಟಿಕೊಟ್ಟಿರುವ ರೀತಿ ಅನನ್ಯವಾಗಿದೆ. 'ರಟ್ಟಿನ ಪೆಟ್ಟಿಗೆಗಳಲ್ಲಿ ತರಲಾದ ಅನಾರೋಗ್ಯ ಪೀಡಿತ ಮತ್ತು ಗಾಯಗೊಂಡ ಪಕ್ಷಿಗಳ ಕ್ಲೋಸ್‌ಅಪ್‌ಗಳು ಮನ ಕಲಕುತ್ತವೆ. ಚಿತ್ರ ಗಾಢವಾಗಿ ತಟ್ಟುತ್ತದೆ' ಎಂದು ಈ ಚಿತ್ರವನ್ನು ವೀಕ್ಷಿಸಿದ ಪ್ರೇಕ್ಷಕರು ಭಾವುಕರಾಗಿ ಹೇಳುತ್ತಾರೆ.

'ಆಲ್ ದಟ್ ಬ್ರೀತ್ಸ್' ನಿರ್ಮಿಸಲು ಸೌನಕ್ ತೆಗೆದುಕೊಂಡ ಕಾಲಾವಕಾಶ ಬರೋಬ್ಬರಿ ಮೂರು ವರ್ಷ! ಅವರ ಈ ಸಾವಧಾನದ ಕೆಲಸವೇ ಹೇಳುತ್ತದೆ, ಪ್ರತಿ ದೃಶ್ಯವನ್ನೂ ಎಷ್ಟು ಆಳಕ್ಕಿಳಿದು ನೋಡಬಲ್ಲ ನಿರ್ದೇಶಕ ಇವರೆಂದು. ನಗರ ಪ್ರದೇಶದಿಂದ ಮನುಷ್ಯತ್ವವೇ ಮರೆಯಾಗುತ್ತಿರುವ ಈ ಸನ್ನಿವೇಶದಲ್ಲಿ ಮಾಲಿನ್ಯಕಾರಕ ವಾತಾವರಣದಲ್ಲೇ ಹೇಗೆ ಮಾನವೀಯತೆ ಅರಳುತ್ತಿದೆ ಎಂಬುದನ್ನು ಚಿತ್ರ ಸೊಗಸಾಗಿ ಕಟ್ಟಿಕೊಡುತ್ತದೆ. ಮನುಷ್ಯ ಮತ್ತು ಪಕ್ಷಿಗಳ ಸಂಬಂಧ ಇಲ್ಲಿ ಕಾವ್ಯಾತ್ಮಕವಾಗಿ ಮೂಡಿಬಂದಿದೆ.

'ಒಂದು ಬದಿಯಲ್ಲಿ ಕೈಗಾರಿಕೆಯ ಕೊಳಕು, ಇನ್ನೊಂದೆಡೆ ಸುಂದರವಾದ ರಾಜ ಪಕ್ಷಿಗಳಿರುವ ನೆಲಮಾಳಿಗೆ. ಇಂತಹ ವಾತಾವರಣದಲ್ಲಿ ನಾನು ನದೀಮ್ ಮತ್ತು ಸೌದ್ ಸಹೋದರರನ್ನು ಭೇಟಿಯಾದೆ. ಆ ಕ್ಷಣವೇ ಇದೊಂದು ಸಿನಿಮೀಯ ಸ್ಥಳ ಎನ್ನುವುದು ನನಗೆ ಹೊಳೆದುಹೋಯಿತು' ಎಂದು ಸೇನ್ ಹೇಳುತ್ತಾರೆ. 'ನೆಲಮಾಳಿಗೆಯ 'ಆ' ಆಸ್ಪತ್ರೆಯಲ್ಲಿ ಕಪ್ಪು ಹದ್ದುಗಳಿಗೆ ಅಗತ್ಯ ಚಿಕಿತ್ಸೆ ದೊರೆಯುತ್ತಿತ್ತು. ಚೇತರಿಸಿಕೊಂಡ ಅವುಗಳು ಮತ್ತೆ ಬಾನಾಡಿ ಆಗುವುದನ್ನು ನೋಡುವುದೇ ಒಂದು ಚೇತೋಹಾರಿ ಅನುಭವವಾಗಿತ್ತು' ಎಂದು ಮೆಲುಕು ಹಾಕುತ್ತಾರೆ.

ಸೌನಕ್ ಅವರು ಒಮ್ಮೆ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಂಡಿದ್ದರಂತೆ. 'ಆಗಸದತ್ತ ದೃಷ್ಟಿ ಬೀರಿದಾಗ ಅದು ಬೂದುಬಣ್ಣದಿಂದ ತುಂಬಿಕೊಂಡಿತ್ತು. ಮಧ್ಯೆ ಮಧ್ಯೆ ಕಪ್ಪು ಚುಕ್ಕೆಗಳು ಕಾಣುತ್ತಿದ್ದವು. ಅವುಗಳೆಲ್ಲ ಕಪ್ಪು ಹದ್ದುಗಳೇ ಆಗಿದ್ದವು. ಅದರಲ್ಲೊಂದು ಹದ್ದು ಅಸ್ವಸ್ಥಗೊಂಡು ಕೆಳಕ್ಕೆ ಉರುಳಿ ಬೀಳುವುದನ್ನು ಕಂಡೆ. ಆ ಘಟನೆಯಿಂದ ನನ್ನ ಮನಸ್ಸು ಕಲಕಿಹೋಯಿತು. ಹೀಗೆ ಕೆಳಗೆ ಬಿದ್ದ ಹದ್ದುಗಳು ಏನಾಗುತ್ತವೆ ಎಂದು ಹುಡುಕುತ್ತಾ ಹೋದಾಗ ನದೀಮ್ ಮತ್ತು ಸೌದ್ ಸಹೋದರರ ಕೆಲಸದ ಬಗೆಗೆ ತಿಳಿಯಿತು' ಎಂದೂ ಅವರು ನೆನೆಯುತ್ತಾರೆ.

'ನಗರದ ನಡವಳಿಕೆಯಲ್ಲಿ ಆಗಿರುವ ಬದಲಾವಣೆಗಳು ಗೋಚರಿಸಬೇಕು. ನಗರದ ಜೀವನವನ್ನು ಒಂದು ದೊಡ್ಡದಾದ ಕ್ಯಾನ್‌ವಾಸ್‌ನಲ್ಲಿ ಬಿಚ್ಚಿಡಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು. ಅದನ್ನು ಸಾಧ್ಯವಾದಷ್ಟು ಎಚ್ಚರಿಕೆಯಿಂದ ಮಾಡಿರುವೆ. ಹವಾಮಾನ ವೈಪರೀತ್ಯದ ಪರಿಣಾಮಗಳನ್ನು, ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಪ್ರೇಕ್ಷಕರಿಗೆ ಮುಟ್ಟಿಸುವಲ್ಲಿ ಈ ಚಿತ್ರ ಯಶಸ್ವಿಯಾದರೆ ನನ್ನ ಶ್ರಮ ಸಾರ್ಥಕ' ಎಂದು ಸೌನಕ್ ಹೇಳುತ್ತಾರೆ. ಭಾರತಕ್ಕೆ ಅವರ ರೂಪದಲ್ಲಿ ಅತ್ಯದ್ಭುತ ನಿರ್ದೇಶಕನೊಬ್ಬ ಸಿಕ್ಕಿದ್ದಾನೆ ಎಂದು ಚಿತ್ರಜಗತ್ತು ಒಕ್ಕೊರಲಿನಿಂದ ಹೊಗಳುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65